ಒ ಎಸ್ 10/2017 ಡಿ.ಡಬ್ಲ್ಯೂ: 1

ಇಂದು ದಿ: 16.07.2025 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ವಾದಿ ಪರ ವಕೀಲರಿಂದ:

ವಾದಿಯು ಯಾವ ಪರಿಹಾರ ಕೇಳಿ ದಾವೆ ಸಲ್ಲಿಸಿದ್ದಾರೆ ಎಂದು ನನಗೆ ಗೊತ್ತು. 1 ಮತ್ತು 2ನೇ ಐಟಂ ಆಸ್ತಿಗಳನ್ನು ನನ್ನ ತಾಯಿ ಖರೀದಿಸಿದ್ದರು ಎಂಬ ಬಗ್ಗೆ ಕ್ರಯ ಪತ್ರಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಒ ಎಸ್ 112/2007ರಲ್ಲಿ ಸಂಪತ್ ಕುಮಾರ್ ಮತ್ತು ಅವರ ತಂಗಿಯನ್ನು ಪಕ್ಷಗಾರರನ್ನಾಗಿ ಮಾಡಿಲ್ಲ. 1 ಮತ್ತು 2ನೇ ಐಟಂ ಆಸ್ತಿಗಳ ಖಾತೆಗಳು 1ನೇ ಪ್ರತಿವಾದಿ ಹೆಸರಿನಲ್ಲಿದೆ ಎಂದರೆ ಸುಳ್ಳು. 1 ಮತ್ತು 2ನೇ ಐಟಂ ಆಸ್ತಿಗಳು ನನ್ನ ತಾಯಿಯ ಹೆಸರಿನಲ್ಲಿ ಖಾತೆ ಇದೆ ಎಂಬ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಆ ರೀತಿಯ ದಾಖಲೆಗಳನ್ನು ನಾನು ಕೊಡದಿದ್ದರೂ ಸಹ ಕೊಟ್ಟಿದ್ದೇನೆ ಎಂದು ಈ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರುಮಾಡಿರುವ ದಾಖಲೆಗಳಲ್ಲಿ ಸಂಪತ್ ಕುಮಾರ್ ಸಹಿ ಇರುವುದಿಲ್ಲ ಮತ್ತು ಅವರು ಪಕ್ಷಗಾರರಲ್ಲ ಎಂದರೆ ಸರಿಯಲ್ಲ. ಜಾರಿ ಅರ್ಜಿಯಲ್ಲಿ ಸಂಪತ್ ಕುಮಾರ್ ಗೆ ನೋಟೀಸ್ ಬಂದಾಗ ದಾಖಲೆಗಳ ಬಗ್ಗೆ ತಿಳಿಯಿತು ಎಂದರೆ ಸುಳ್ಳು. ನಂತರ ವಿಚಾರ ತಿಳಿದು ವಾದಿಯು ಈ ದಾವೆ ಸಲ್ಲಿಸಿದ್ದರು ಎಂದರೆ ಸುಳ್ಳು.

ನನ್ನ ತಂದೆ ಪುಟ್ಟ ಮಾದಪ್ಪರವರು 1960ರಲ್ಲಿ ದಾವಾ ಆಸ್ತಿಗಳನ್ನು ಬೋಗ್ಯ ಮಾಡಿ ನಂತರ ತೀರುವಳಿ ಮಾಡಿ ಖಾತೆಯನ್ನು ಅವರ ಹೆಸರಿಗೆ ಮಾಡಿಕೊಂಡಿದ್ದಾರೆ ಎಂದರೆ ಅದು ಮೋಸ ಎನ್ನುತ್ತಾರೆ. ಬೇರೆ ಆಸ್ತಿಗಳಿಂದ 1 ಮತ್ತು 2ನೇ ಐಟಂ ಆಸ್ತಿಗಳನ್ನು ಪುಟ್ಟ ಮಾದಪ್ಪ ಸಂಪಾದನೆ ಮಾಡಿದ್ದರು ಎಂದರೆ ಸರಿಯಲ್ಲ. ಆ ಕಾರಣ ನನ್ನ ತಂದೆಯು 1 ಮತ್ತು 2ನೇ ಐಟಂ ಆಸ್ತಿಗಳ ಕ್ರಯ ಪತ್ರಗಳನ್ನು ನನ್ನ ತಾಯಿ ಹೆಸರಿಗೆ ಮಾಡಿಸಿದ್ದರು ಎಂದರೆ ಸರಿಯಲ್ಲ. ಪಿತ್ರಾರ್ಜಿತ ಆಸ್ತಿಗಳ ಆದಾಯ ಹೊರತುಪಡಿಸಿ ನನ್ನ ತಾಯಿಗೆ ಬೇರೆ ಆದಾಯ ಇರಲಿಲ್ಲ ಎಂದರೆ ನನ್ನ ತಾತನ ಮನೆಯಿಂದ ಆಸ್ತಿಗಳನ್ನು ಕೊಟ್ಟಿದ್ದಾರೆ ಎನ್ನುತ್ತಾರೆ. ತಾಯಿ ಮನೆ ಆಸ್ತಿಗಳು ಇದ್ದ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಗಳನ್ನು ಕೊಟ್ಟಿದ್ದೇನೆ. ಒ ಎಸ್ 112/2007ರಲ್ಲಿ ವಾದಿ, 2 ರಿಂದ 4ನೇ ಪ್ರತಿವಾದಿಗಳಿಗೆ ಹಕ್ಕು ಇದ್ದರೂ ಸಹ ಅದನ್ನು ಮರೆಮಾಚಿ ನಾನು ಡಿಕ್ರಿ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಗೆ ವಾದಿ ಮತ್ತು ಮತ್ತು 2 ರಿಂದ 4ನೇ ಪ್ರತಿವಾದಿಗಳನ್ನು ಹೊರತು ಪಡಿಸಿ ಬೇರೆ ವಾರಸುದಾರರು ಇಲ್ಲ ಎಂದರೆ 3ನೇ ಹೆಂಡತಿ ಮಕ್ಕಳು ಇರುತ್ತಾರೆ ಎನ್ನುತ್ತಾರೆ. 6 ರಿಂದ 9ನೇ ಪ್ರತಿವಾದಿಗಳಿಗೂ ದಾವಾ ಆಸ್ತಿಗೂ ಸಂಬಂಧ ಇಲ್ಲ ಎಂದರೆ ಇದ್ದರೆ ತೆಗೆದುಕೊಳ್ಳಲಿ ಎನ್ನುತ್ತಾರೆ. ಒ ಎಸ್ 112/2007 ರ ತೀರ್ಪಿನ ಪ್ರತಿಯನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೀರಾ ಎಂದರೆ ಅದು ಸುಳ್ಳು ಎನ್ನುತ್ತಾರೆ. ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳಾದ ಕಾರಣ

ವಾದಿಗೂ ಸಹ ಎಲ್ಲಾ ಆಸ್ತಿಗಳಲ್ಲಿ ಸಮನಾದ ಹಕ್ಕು ಇದೆ ಎಂದರೆ ನನ್ನ ತಾಯಿ ಆಸ್ತಿಗೆ ಅವರಿಗೆ ಸಂಬಂಧ ಇಲ್ಲ ಎನ್ನುತ್ತಾರೆ.

ಒ ಎಸ್ 57/2018ರ ವಾದಿ ಪರ ವಕೀಲರಿಂದಃ

ಶಿವಣ್ಣ ರವರು ನನ್ನ ತಂದೆ ವಿರುದ್ಧ ಸಲ್ಲಿಸಿದ್ದ ದಾವೆ ಬಗ್ಗೆ ನನಗೆ ತಿಳಿದಿದೆ. ಒ ಎಸ್ 57/2018 ಎಂದು ನಮೂದು ಇತ್ತು ಎಂದರೆ ಸರಿ. ಶಿವಣ್ಣ ನನ್ನ ತಂದೆಯ ತಮ್ಮ. ಶಿವಣ್ಣ ಅವರ ತಂದೆಯ ಆಸ್ತಿ ಬಗ್ಗೆ ದಾವೆ ಸಲ್ಲಿಸಿದ್ದು, ನನ್ನ ತಾಯಿ ಆಸ್ತಿ ಬಗ್ಗೆ ದಾವೆ ಸಲ್ಲಿಸಿಲ್ಲ. ಶಿವಣ್ಣ ಅವರ ದಾವೆಯಲ್ಲಿ ನನ್ನನ್ನು ಪಕ್ಷಗಾರರನ್ನಾಗಿ ಮಾಡಿಲ್ಲ. ಶಿವಣ್ಣ ರವರ ತಂದೆ ಆಸ್ತಿಗೂ ನಮಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ನಂಜನಗೂಡು.